# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## SC.93/2021

**P.W.-02**
**C.W.-02**

| | | |
|---|---|---|
| ಹೆಸರು | : | Papanna @ Surya Kumar |
| ತಂದೆಯ ಹೆಸರು | : | Mahadevaswamy |
| ವಯಸ್ಸು | : | 26 ವರ್ಷ |
| ಉದ್ಯೋಗ | : | Employee in MNC |
| ವಾಸಸ್ಥಳ | : | Mysuru |

**ದಿನಾಂಕಃ 23.12.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–**

ನನ್ನ ಸ್ವಂತ ಊರು ಮೈಸೂರು. ಮೈಸೂರಿನ ಕೆಸರೆಯ ಕುರಿಮಂಡಿಯ 5 ನೇ ಕ್ರಾಸಿನಲ್ಲಿ ವಾಸ ಮಾಡುತ್ತೇನೆ. ಚಾಸಾ–1 ಮತ್ತು 3 ನನಗೆ ಗೊತ್ತು. ಅವರಿಬ್ಬರೂ ನಮ್ಮ ಮನೆಯ ಪಕ್ಕದ ನಿವಾಸಿಗಳು. ಮೃತ ರವಿ ಅಲಿಯಾಸ್ ಬಚ್ಚಾ ನಮ್ಮ ಮನೆಯಲ್ಲಿ ಊಟ ಮಾಡಲು ದಿನವೂ ಬರುತ್ತಿದ್ದ. ಆತ ಮೃತ ಪಡುವ 5–6 ವರ್ಷಗಳಿಂದಲೂ ಆತ ನಮ್ಮ ಮನೆಗೆ ಊಟಕ್ಕೆ ಬರುತ್ತಿದ್ದ. ನಮ್ಮ ಮನೆಯ ಕೆಳಗಡೆ, ಸೋನಿಯಾ ಗಾಂಧಿ ಬಡಾವಣೆಯಲ್ಲಿ ಚಾಸಾ–1 ರವರು ಆತನಿಗೆ ಒಂದು ಬಾಡಿಗೆ ಮನೆಯನ್ನು ಮಾಡಿಕೊಟ್ಟಿದ್ದರು. ಚಾಸಾ–1 ರವರು ಕಾಂಟ್ರಾಕ್ಟರ್ ಆಗಿದ್ದರು. ಅವರು ರಸ್ತೆ ಕಾಮಗಾರಿಗಳನ್ನು ಮಾಡಿಸುತ್ತಿದ್ದರು. ಮೃತ ರವಿ ರೋಡ್ ರೋಲರಿನ ಚಾಲಕನಾಗಿದ್ದ. ಆತ ಚಾಸಾ–1 ರವರ ಬಳಿಯಲ್ಲಿ ಸುಮಾರು 8–10 ವರ್ಷಗಳಿಂದ ಕೆಲಸ ಮಾಡುತ್ತಿದ್ದ.

2. ನಾನು ಈ ಕೆಲಸಕ್ಕೆ ಸೇರುವ ಮೊದಲು ಮೈಸೂರಿನ ಕುರುಬಾರ ಹಳ್ಳಿಯಲ್ಲಿರುವ ಸಿದ್ದಾರ್ಥನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಡಿಗ್ರಿ ಓದುತ್ತಿದ್ದೆ.

3. ನ್ಯಾಯಾಲಯದ ಮುಂದಿರುವ ಮೂವರು ಆರೋಪಿತರು ಗೊತ್ತು. ಅವರು ನನ್ನ ಅಣ್ಣನ ಸ್ನೇಹಿತರಾಗಿದ್ದರು. ನನಗೆ ಮೃತ ರವಿಯ ಮೂಲಕ ಪರಿಚಯವಾಗಿತ್ತು. ನಮ್ಮ ಮನೆಗೆ ಬಂದು ಊಟ–ತಿಂಡಿ ಮಾಡುತ್ತಿದ್ದರು. 1 ನೇ ಆರೋಪಿ ಅವರ ತಂದೆಯ ಇಟ್ಟುಕೊಂಡಿದ್ದ ಹೋಟೆಲಿನಲ್ಲಿ

ಕೆಲಸ ಮಾಡುತ್ತಿದ್ದ. 2 ನೇ ಆರೋಪಿ ನಿಖಿಲ್ ಆರ್.ಎಂ.ಸಿಯಲ್ಲಿ ಕೆಲಸ ಮಾಡುತ್ತಿದ್ದ. 3 ನೇ ಆರೋಪಿ ಬಾರ್ ನಲ್ಲಿ ಕೆಲಸ ಮಾಡುತ್ತಿದ್ದ.

4. ಮೃತ ರವಿ ಮೃತ ಪಟ್ಟು ಎರಡು ವರ್ಷಗಳಾದವು. ದಿಃ14.12.2020 ರಂದು ಸುಮಾರು ರಾತ್ರಿ 9.30 ರ ಸಮಯಕ್ಕೆ ನಾನು ದೇವಸ್ಥಾನಕ್ಕೆ ಹೋಗಿ ಬರುತ್ತಿದ್ದೆ. ಕುರಿಮಂಡಿಯ ಒಳಗಡೆ ಮೃತ ರವಿ ಮತ್ತು ಈ ಮೂವರು ಆರೋಪಿತರು ಜಗಳ ಮಾಡುತ್ತಿದ್ದರು. 2 ನೇ ಆರೋಪಿಗೆ ನಮ್ಮ ಮನೆಯ ನಾಯಿ ಕಚ್ಚಿತ್ತು. ಎಲ್ಲರೂ ಮದ್ಯಪಾನ ಮಾಡಿದ್ದರು. 1 ನೇ ಆರೋಪಿ ವಿನಯ್ 2 ನೇ ಆರೋಪಿಗೆ ಇಂಜಕ್ಷನ್ ಹಾಕಿಸಬೇಕು ಎಂದು ಹೇಳುತ್ತಿದ್ದ, ಆಗ ಮೃತ ರವಿ ಎಲ್ಲರೂ ಕುಡಿದಿರುವುದರಿಂದ, ಈಗ ಇಂಜಕ್ಷನ್ ಹಾಕಿಸುವುದು ಬೇಡ, ಅದು ವಿಷವಾಗುತ್ತದೆ ಎಂದು ಹೇಳುತ್ತಿದ್ದ. 1 ನೇ ಆರೋಪಿ, ನಾನು ಕರೆದುಕೊಂಡು ಹೋಗಿ ಇಂಜಕ್ಷನ್ ಹಾಕಿಸುತ್ತೇನೆ ಎಂದು ಹೇಳುತ್ತಿದ್ದ. ಆಗ ಆತ ಆ್ಯಂಬುಲೆನ್ಸ್ ಡ್ರೈವರ್ ಚಾಸಾ-14 ರವರನ್ನು ಅಲ್ಲಿಗೆ ಕರೆಸಿದ. ಆಗ 'ಬೇಡ, ಬೇಡ' ಎಂದು ಮೃತ ರವಿ ಹೇಳಿದ. 1 ನೇ ಆರೋಪಿ ಇಂಜನಕ್ಷನನ್ನು 2 ನೇ ಆರೋಪಿಗೆ ಹಾಕಿಸಲೇಬೇಕು ಎಂದು ಹಠ ಹಿಡಿದ. ಆಗ 1 ನೇ ಆರೋಪಿಗೂ ಮೃತ ರವಿಗೂ ಜಗಳ ಪ್ರಾರಂಭವಾಯಿತು. ಬಿಡಿಸಲು ಬಂದ ಚಾಸಾ-14 ಜಯಸೂರ್ಯರವರಿಗೆ ಮೃತ ರವಿ ಕೈಯಲ್ಲಿ ಹೊಡೆದ. ಆಗ ಚಾಸಾ-3 ರವರು ಸಹ ಅಲ್ಲಿಗೆ ಬಂದು ಜಗಳವನ್ನು ಬಿಡಿಸಿದರು. ನಾನು ಮೃತ ರವಿಯನ್ನು ನಮ್ಮ ಮನೆಗೆ ಕರೆದುಕೊಂಡು ಬಂದು ಊಟ ಮಾಡಿಸಿ, ಇಲ್ಲೆ ಮಲಗಿಕೋ, ಎಂದು ಹೇಳಿದೆ. ಆಗ ನಮ್ಮ ಅಣ್ಣ, ಇಲ್ಲಿ ಈತನು ಮಲಗುವುದು ಬೇಡ, ಕುಡಿದುಕೊಂಡು ನಾಟಕವಾಡುತ್ತಾನೆ, ಅವನನ್ನು ಕಳಿಸು ಎಂದರು. ನಾನು ಆತನನ್ನು ಕರೆದುಕೊಂಡು ಹೋಗಿ ಮನೆಗೆ ಬಿಟ್ಟು ಬಂದೆ. ಆಗ ಸಮಯ ರಾತ್ರಿ 10.30 ರಿಂದ 10.45 ಆಗಿರಬಹುದು. ನಾನು ವಾಪಸ್ಸು ಮನೆಗೆ ಬಂದು ಮಲಗಿಕೊಂಡೆ.

5. ಮರುದಿನ ಬೆಳಿಗ್ಗೆ ನಾನು ಎಂದಿನಂತೆ ಕೆಲಸಕ್ಕೆ ಹೋದೆ. ನನ್ನದು ಫೀಲ್ಡ್ ವರ್ಕ್. ಬೆಳಿಗ್ಗೆ 10.30 ರಿಂದ 11.00 ಗಂಟೆಯ ಸಮಯಕ್ಕೆ ನನ್ನ ಅಣ್ಣ ನನಗೆ ಫೋನ್ ಮಾಡಿ, ರಾತ್ರಿ ರವಿ ನಿನಗೆ ಏನಾದರೂ ಹೇಳಿದನ ಎಂದು ಕೇಳಿದರು. ನಾನು ಇಲ್ಲ ಎಂದೆ. ಆಗ ನನ್ನ ಅಣ್ಣ, ಆತನನ್ನು ಇಲ್ಲಿ ಸಾಯಿಸಿದ್ದಾರೆ ಎಂದು ಹೇಳಿದ. ನಾನು ಕೂಡಲೇ ನಮ್ಮ ಏರಿಯಾಗೆ ಬಂದು ರವಿಯ ಮನೆಗೆ ಹೋಗಿ ನೋಡಿದೆ. ಆಗ ಅಲ್ಲಿದ್ದ ಪಿಎಸ್ಐ ರವರು ಈಗ ಹೋಗಿ ನೋಡುವ ಹಾಗಿಲ್ಲ ಎಂದು ಹೇಳಿ ನನ್ನನ್ನು ಕಳುಹಿಸಿದರು. ನಂತರ ಶವವನ್ನು ನಾನು ನೋಡಿದೆ. ನಂತರ ಚಾಸಾ-1 ರವರು ಮೃತ ರವಿಯ ತಂದೆ

ತಾಯಿಗೆ ವಿಷಯವನ್ನು ತಿಳಿಸಿದರು. ಅವರು ನೇರವಾಗಿ ಶವಾಗಾರದ ಬಳಿ ಬಂದಿದ್ದರು. ನಂತರ ಶವವನ್ನು ನಾವೇ ಪಡೆದುಕೊಂಡೆವು.

6. ನಾನು ಮೃತ ರವಿ ಇದ್ದಂತಹ ಮನೆಯಲ್ಲಿ ನೋಡಿದ ಶವದ, ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ-3, 5 ರಿಂದ 11ರವರೆಗಿನ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಪೊಲೀಸರು ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ.

7. ರಾತ್ರಿ ಅವರೆಲ್ಲರ ನಡುವೆ ಗಲಾಟೆಯಾಗುತ್ತಿದ್ದಾಗ, ಅವರುಗಳ ನಡುವೆ ನಡೆದ ಸಂಭಾಷಣೆಯನ್ನು ಪೂರ್ಣವಾಗಿ ಕೇಳಿಸಿಕೊಳ್ಳಲಿಲ್ಲ. ಸಾಕ್ಷಿ ಪುನಃ ನುಡಿಯುತ್ತಾರೆ, ರವಿಯನ್ನು ನಾನು ಎಳೆದುಕೊಂಡು ಹೋಗುತ್ತಿದ್ದಾಗ, ಯಾರೋ, ನಿನಗೊಂದು ಗತಿ ಕಾಣಿಸುತ್ತೇನೆ ಎಂದರು, ಅದು ಯಾರು ಎಂದು ನನಗೆ ಗೊತ್ತಾಗಲಿಲ್ಲ. ಏಕೆಂದರೆ ನಾನು ತಿರುಗಿ ನೋಡಲಿಲ್ಲ.

8. ಗಲಾಟೆ ನಡೆಯುತ್ತಿದ್ದ ಜಾಗ ಸರ್ಕಲ್ ಆಗಿತ್ತು. ಅಲ್ಲಿ ಬೀದಿ ದೀಪದ ಬೆಳಕು ಚೆನ್ನಾಗಿತ್ತು.

9. ನಂತರದ ದಿನಗಳಲ್ಲಿ ನಾನು ಪೊ.ಠಾಣೆಗೆ ಹೋಗಿರುವುದಿಲ್ಲ.

**ಪಾಟೀಸವಾಲುಃ 1 ಮತ್ತು 3 ನೇ ಆರೋಪಿಗಳ ಪರ ವಕೀಲರಿಂದಃ-**

10. ನಮ್ಮ ಕಂಪನಿಯ ಹೆಡ್ ಆಫೀಸ್ ಬೆಂಗಳೂರಿನಲ್ಲಿದೆ. ನಾನು ಕೆಲಸ ಮಾಡುತ್ತಿರುವುದು ಮೈಸೂರಿನಲ್ಲಿ.

11. ಮೃತ ರವಿ ಅಲಿಯಾಸ್ ಬಚ್ಚಾನ ಊರು ನವಿಲೂರು, ಟಿ.ನರಸೀಪುರ ತಾಲ್ಲೂಕು. ಆತನ ತಂದೆಯ ಹೆಸರು ನನಗೆ ಗೊತ್ತಿಲ್ಲ. ರವಿ ಕುರಿಮಂಡಿಗೆ ಬಂದು 10 ವರ್ಷಗಳಾಗಿದ್ದವು. ನಾನು ಪೊಲೀಸರ ಮುಂದೆ 'ಈತನು ಚಾಮರಾಜನಗರ ಜಿಲ್ಲೆಯ ಗಣಗನೂರು ಪುರ ಗ್ರಾಮದವನೆಂದು ಗೊತ್ತಿತ್ತು' ಎಂದು ಹೇಳಿರುವುದಿಲ್ಲ. 10 ವರ್ಷಗಳಿಂದಲೂ ಮೃತ ರವಿ ಚಾಸಾ-1ರವರ ಕೈಕೆಳಗೆ ಕೆಲಸ ಮಾಡುತ್ತಿದ್ದ. ಪೊಲೀಸರ ಮುಂದೆ ಹೇಳಿಕೆಯಲ್ಲಿ, ಚಾಸಾ-1ರವರು ಮೃತ ರವಿಗೆ ಕುರಿಮಂಡಿಯಲ್ಲಿ ಒಂದು ಬಾಡಿಗೆ ಮನೆಯನ್ನು ಮಾಡಿಕೊಟ್ಟಿದ್ದರು ಎಂದು ಹೇಳಿರುತ್ತೇನೆ.

12. ನಮ್ಮ ಮನೆಯಲ್ಲಿ, ಮೃತ ರವಿ ಮೃತಪಡುವ ಕಾಲಕ್ಕೆ, ನನ್ನ ತಂದೆ-ತಾಯಿ ಮತ್ತು ನನ್ನ ಇಬ್ಬರು ಅಣ್ಣಂದಿರು, ನಾನು ಇದ್ದೆವು. ಮೃತ ರವಿಯನ್ನು ದಿನಾಲೂ ನಾನು ಭೇಟಿ ಮಾಡತ್ತಿದ್ದೆ. ಆತನಿಗೆ

ಊಟ ಕೊಡಲು ನಾವು ಯಾವುದೇ ಹಣವನ್ನು ತೆಗೆದುಕೊಳ್ಳುತ್ತಿರಲಿಲ್ಲ. ದಿಃ15.12.2020 ರಂದು ಚಾಸಾ-1 ರವರನ್ನು ನಾನು ಶವವನ್ನು ಪಡೆಯುವ ಕಾಲಕ್ಕೆ ಪೋಸ್ಟ್ ಮಾಟಮ್ ಮಾಡಿದ ಕಾಲಕೆ, ಶವಾಗಾರದಲ್ಲಿ ಭೇಟಿ ಮಾಡಿರುತ್ತೇನೆ. ಅದಕ್ಕೂ ಮುಂಚೆ ನಾನು ಚಾಸಾ-1 ರವರನ್ನು ಭೇಟಿಯಾಗಿರುವುದಿಲ್ಲ. ಆರೋಪಿತರು ಮತ್ತು ಮೃತ ರವಿ ದಿನಾಲೂ ಒಟ್ಟಿಗೆ ಇರುತ್ತಿದ್ದರಾ ಎಂದು ಕೇಳಿದ ಪ್ರಶ್ನೆಗೆ, ಸಾಕ್ಷಿ 3 ನೇ ಆರೋಪಿ ಮತ್ತು ಮೃತ ರವಿ ದಿನಾಲೂ ಒಟ್ಟಿಗೆ ಇರುತ್ತಿದ್ದರು ಎನ್ನುತ್ತಾರೆ. 3 ನೇ ಆರೋಪಿಯನ್ನು ಆತನ ಮನೆಯವರು ಮನೆಯಿಂದ ಓಡಿಸಿದ್ದರು. ಯಾವ ವಿಷಯಕ್ಕೆ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಕೆಲಸ ದಿನಾಲೂ ಮಧ್ಯಾಹ್ನ ಸುಮಾರು 3.30 ರಿಂದ 4.00 ಗಂಟೆಯ ಸಮಯಕ್ಕೆ ಮುಗಿಯುತ್ತದೆ. ನಂತರ ನಾನು ಜಿಮ್ ಗೆ ಹೋಗುತ್ತದೆ. ಆ ಸಮಯದಲ್ಲಿ ಮೃತ ರವಿಯನ್ನು ಭೇಟಿ ಮಾಡುತ್ತಿದ್ದೆ. ಆ ಸಮಯದಲ್ಲಿ ಮೃತ ರವಿಯ ಜೊತೆ ಆರೋಪಿತರಲ್ಲಿ ಯಾರಾದರೂ ಒಬ್ಬರು ಜೊತೆಯಲ್ಲಿರುತ್ತಿದ್ದರು. 10 ವರ್ಷಗಳ ಕಾಲದಲ್ಲಿ, ಆರೋಪಿತರು ಮತ್ತು ಮೃತ ರವಿಯ ನಡುವೆ ಯಾವಗಲಾದರೂ ಗಲಾಟೆಯಾಗಿತ್ತಾ ಎಂದು ಕೇಳಿದ ಪ್ರಶ್ನೆಗೆ, ಸಾಕ್ಷಿ, 'ನನಗೆ ಗೊತ್ತಿಲ್ಲ' ಎಂದು ಹೇಳುತ್ತಾರೆ.

13. ದಿಃ14.12.2020 ರಂದು ರಾತ್ರಿ 9.30 ಕ್ಕೆ ನಾನು ದೇವಸ್ಥಾನಕ್ಕೆ ಹೋಗಿ ಬರುತ್ತಿದ್ದೆ. 1 ನೇ ಆರೋಪಿಯ ಹೋಟೆಲ್ ಬೆಳಿಗ್ಗೆ 6.00 ಗಂಟೆಯಿಂದ ತೆರೆದು ರಾತ್ರಿ 11.00 ಗಂಟೆಯವರೆಗೂ ತೆರೆದಿರುತ್ತಿತ್ತು. ಸಾಕ್ಷಿ ಸ್ವತಃ ನುಡಿಯುತ್ತಾರೆ, ಆದರೆ 1 ನೇ ಆರೋಪಿ ಬೆಳಿಗ್ಗೆ 2 ಗಂಟೆ ಮತ್ತು ರಾತ್ರಿ 2 ಗಂಟೆ ಮಾತ್ರ ಪರೋಟ ಮಾಡಲು ಹೋಗುತ್ತಿದ್ದ ಎನ್ನುತ್ತಾರೆ. ನಾನು ಆತನ ಹೋಟೆಲಿನಲ್ಲಿ ಊಟ ಮಾಡಿರುತ್ತೇನೆ. ಆ ಹೋಟೆಲನ್ನು ನೋಡಿಕೊಳ್ಳುತ್ತಿದ್ದವರು, ಆತನ ತಂದೆ ಮತ್ತು ತಮ್ಮ. ನಂತರ 1 ನೇ ಆರೋಪಿ ಬೇರೆಕಡೆ ಎಲ್ಲಿಯಾದರೂ ಕೆಲಸಕ್ಕೆ ಹೋಗುತ್ತಿದ್ದನೋ, ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ನಾನು ಊಟ ಮಾಡಲು ಹೋದಾಗ, 1 ನೇ ಆರೋಪಿ ಹೋಟೆಲಿನಲ್ಲಿ ಇರುತ್ತಿದ್ದ.

14. ದಿಃ14.12.2020 ರಂದು ರಾತ್ರಿ 9.30 ಕ್ಕೆ ಕುರಿಮಂಡಿಯ ಹೊರಗಡೆ ಆ್ಯಂಬುಲೆನ್ಸ್ ಬಂತು. ಅದರ ನಂಬರ್ ನನಗೆ ಗೊತ್ತಿಲ್ಲ. ಆ ಆಂಬುಲೆನ್ಸನ್ನು 1 ನೇ ಆರೋಪಿ ಕರೆಸಿದ್ದ. 1 ನೇ ಆರೋಪಿ ಆ್ಯಂಬುಲೆನ್ಸನ್ನು ಕರೆಸಿದ್ದನ್ನು ಎನ್ನುವುದನ್ನು ನನಗೆ ಯಾರು ಹೇಳಿರುವುದಿಲ್ಲ. ಆ್ಯಂಬುಲೆನ್ಸನ್ನು ಚಲಾಯಿಸಿಕೊಂಡು ಬಂದವನ್ನು ನನ್ನ ಸ್ನೇಹಿತನಲ್ಲ. ನಮ್ಮ ಮನೆಯಿಂದ ಕುರಿ ಮಂಡಿಗೆ ಬಂದು ಹೋಗುವವರೆಲ್ಲಾ ಕಾಣಿಸುತ್ತಾರೆ. ಸಾಧಾರಣವಾಗಿ ಕುರಿಮಂಡಿಯಲ್ಲಿ ಕೆಲಸ ಮಾಡುವವರೆಲ್ಲಾ ಅಲ್ಲಿ

ರಾತ್ರಿ ಎಲ್ಲಾ ಓಡಾಡುತ್ತಾರೆ ಎನ್ನುವುದು ಸರಿ. ಆದರೆ ಅಲ್ಲಿ ಯಾರು ಯಾರು ಓಡಾಡುತ್ತಾರೆ ಎನ್ನುವುದು ನನಗೆ ಮಾಹಿತಿ ಇಲ್ಲ. ಚಾಸಾ–3 ನನ್ನ ಪಕ್ಕದ ಮನೆಯವರು. ಊಟವಾದ ನಂತರ ನಾನು ಚಾಸಾ–3 ರವರು ಅಲ್ಲಿ ವಾಕ್ ಮಾಡುವುದಿಲ್ಲ. ಅಲ್ಲಿಗೆ ಆ್ಯಂಬುಲೆನ್ಸ್ ಬರುವ ಪೂರ್ವದಲ್ಲಿ ಯಾವುದೇ ದ್ವಿಚಕ್ರ ವಾಹನ ಅಲ್ಲಿರಲಿಲ್ಲ. ಆರೋಪಿತರು ಎಲ್ಲಿ ಕುಡಿದುಕೊಂಡು ಬಂದಿದ್ದರು ಎನ್ನುವುದು ನನಗೆ ಗೊತ್ತಿರಲಿಲ್ಲ. ಮೃತ ರವಿಯನ್ನು ಮನೆಗೆ ಕರೆದುಕೊಂಡು ಬಂದು ಊಟ ಮಾಡಿಸಿ ಇಲ್ಲೇ ಮಲಗಿಕೋ ಎಂದು ನಾನು ಹೇಳಿದಾಗ, ನನ್ನ ಅಣ್ಣ, ಆತ ಕುಡಿದಿದ್ದಾನೆ, ಇಲ್ಲಿ ಮಲಗವುದು ಬೇಡ, ಮನೆಗೆ ಕಳಿಸು ಎಂದು ಹೇಳಿದ ವಿಷಯವನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎನ್ನುವುದು ಸರಿ. ಆರೋಪಿತರೊಂದಿಗೆ ನಾನು ಚಾಸಾ–14 ರವರನ್ನು ಆ ಹಿಂದೆ ನೋಡಿರಲಿಲ್ಲ.

15. ಅಲ್ಲಿ ನಾನು ಹೇಳಿದಂತೆ ಆರೋಪಿತರು ಮತ್ತು ಮೃತ ರವಿಯ ನಡುವೆ ಯಾವುದೇ ರೀತಿಯ ಗಲಾಟೆ ನಡೆದಿರಲಿಲ್ಲ ಮತ್ತು ನಾನು ಹೋಗಿ ಬಿಡಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ಅಂತಹ ಗಲಾಟೆ ಆಗಿದ್ದೇ ಆದಲ್ಲಿ ನೀವು 101 ಗಾಗಲೀ, ಕಂಟ್ರೋಲ್ ರೂಂಗಾಗಲೀ, ಅಥವಾ ಕುದ್ದು ಹೋಗಿ ಎನ್.ಆರ್.ಪೊ.ಠಾಣೆಗೆ ದೂರನ್ನು ನೀಡುತ್ತಿದ್ದೀರಿ ಎಂದು ಮಾಡಿದ ಸಲಹೆಗೆ ಸಾಕ್ಷಿ, ಅವರೆಲ್ಲರೂ ಸ್ನೇಹಿತರಾಗಿದ್ದರಿಂದ, ಆ ರೀತಿ ಮಾಡಲಿಲ್ಲ ಎನ್ನುತ್ತಾರೆ. ಆರೋಪಿತರೆಲ್ಲರೂ ನಂತರ ಒಟ್ಟಿಗೆ ಹೋದರು.

16. ಮರುದಿನ ಬೆಳಿಗ್ಗೆ 10.30 ರಿಂದ 11.00 ರ ಸಮಯಕ್ಕೆ ನನ್ನ ಅಣ್ಣ ಮೋಹನ್ ಕುಮಾರು ನನಗೆ ಫೋನು ಮಾಡಿ ವಿಷಯ ತಿಳಿಸಿದ್ದ. ನಾನು ಆಗ ಬಂಬೂ ಬಜಾರ್ ಬಳಿಯಲ್ಲಿ ಇದ್ದೆ. ನಾನು ಕೂಡಲೇ ರವಿಯ ಮನೆಗೆ ಬಂದೆ. ಅಲ್ಲಿ ಪೊಲೀಸರು ಇದ್ದರು. ಪೊಲೀಸರನ್ನು ಹೊರತು ಪಡಿಸಿ ಅಲ್ಲಿ ಜನರಿದ್ದರು. ಅಲ್ಲದೇ ಪುರುಷೋತ್ತಮ್, ವರಣ್ ಮತ್ತು ವಿನೋದ್ ಸಹ ಇದ್ದರು. ನನ್ನನ್ನು ಅಲ್ಲಿದ್ದ ಪಿಎಸ್ಐ ಒಳಗೆ ಬಿಡಲಿಲ್ಲ. ನಾನು ಈ ದಿನ ಗುರುತಿಸಿದಂತಹ ನಿಪಿ–3, 5 ರಿಂದ 11 ಫೋಟೋಗಳನ್ನು ಈ ಮೊದಲೇ ನಾನು ಪೊ.ಠಾಣೆಯಲ್ಲಿ ನೋಡಿದ್ದೆ. ಅವುಗಳನ್ನು ನೋಡಿದ ದಿನಾಂಕದ ನೆನಪಿಲ್ಲ. ನಿಪಿ–3 ಮತ್ತು 5 ರಿಂದ 11 ನ್ನು ನಾನು ಈ ಮೊದಲು ಪೊ.ಠಾಣೆಯಲ್ಲಿ ನೋಡಿದ ಬಾಬ್ತು, ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ. ನಾನು ಹೇಳಿದಂತೆ ಆರೋಪಿತರು ಮತ್ತು ಮೃತ ರವಿಯ ನಡುವೆ ಯಾವತ್ತಿಗೂ ಗಲಾಟೆ ಆಗಿರಲಿಲ್ಲ ಎನ್ನುವುದು ಸರಿಯಲ್ಲ. ಅಂತಹ ಯಾವುದೇ ಗಲಾಟೆಯನ್ನು ನಾನು ನೋಡಿರುವುದಿಲ್ಲ ಮತ್ತು ಬಿಡಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ನಾನು ಚಾಸಾ–1 ರವರ

ಮಾತನ್ನು ಕೇಳಿಕೊಂಡು ಈ ದಿನ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮೃತ ರವಿಯ ಸಾವಿಗೂ ಮತ್ತು ನ್ಯಾಯಾಲಯದ ಮುಂದಿರುವ ಆರೋಪಿತರಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎನ್ನುವುದು ಸರಿಯಲ್ಲ.

**ಪಾಟೀಸವಾಲಿಗಾಗಿ 2 ನೇ ಆರೋಪಿ ಪರ ವಕೀಲರು ಸಮಯ ಕೋರಿದ್ದು ಸಮಯವನ್ನು ನೀಡಲು ನಿರಾಕರಿಸಿ, ಪಾಟೀಸವಾಲನ್ನು 'ಇಲ್ಲ' ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.